**ಅನುಭವ ಕಥನ**

# ಜಪಯಜ್ಞದ ಅನುಭವ

ಡಾ. ಎಂ. ಎಲ್. ಲಲಿತಮ್ಮ

(ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮವು, ಜಪಯಜ್ಞವೆಂಬ ಶಿಬಿರಗಳನ್ನು ಹಮ್ಮಿಕೊಂಡಿದೆ. ಈಗಾಗಲೇ ಐದು ದಿನಗಳ ಅವಧಿಯ ಮೂರು ಶಿಬಿರಗಳು ನಡೆದಿವೆ. ಈ ಶಿಬಿರಗಳ ಅನುಭವಗಳನ್ನು ಶಿಬಿರಾರ್ಥಿಯೊಬ್ಬರು ನಮಗೆ ಮಾಡಿಕೊಟ್ಟಿದ್ದಾರೆ.)

**"ಗೃಹಸ್ಥರೂ ಆಗಾಗ್ಗೆ ಏಕಾಂತಸ್ಥಳಗಳಿಗೆ ಹೋಗಿ ಕೆಲವು ದಿನಗಳನ್ನಾದರೂ ಭಗವಚ್ಚಿಂತನೆಯಲ್ಲಿ ಕಳೆಯಬೇಕು"** ಎಂಬ ಶ್ರೀರಾಮಕೃಷ್ಣರ ಉಪದೇಶಾಮೃತವನ್ನು ಆಧರಿಸಿ, ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮದವರು ಸಾಧಕರ ಸಾಧನೆಗೆ ಅನುಕೂಲವಾಗುವಂತೆ, ಜಪಯಜ್ಞದ ಶಿಬಿರವನ್ನು ಏರ್ಪಡಿಸಿದ್ದರು. ಇದು ಅತ್ಯಂತ ಅಭಿನಂದನಾರ್ಹ ಮತ್ತು ಸ್ವಾಗತಾರ್ಹ.

ಈ ಜಪಯಜ್ಞದ ಉದ್ದೇಶ ತೀವ್ರ ಆಧ್ಯಾತ್ಮಿಕ ಸಾಧನೆಗೆ ಒತ್ತು ಕೊಡುವುದಾಗಿತ್ತು. ಕಾರ್ಯಕ್ರಮದ ಎಲ್ಲ ಅಂಶಗಳನ್ನೂ ಆಶ್ರಮದವರು ಸುವ್ಯವಸ್ಥಿತವಾಗಿ ನಿಯೋಜಿಸಿದ್ದರು. ಸಂಸಾರದ ದುಗುಡವನ್ನು ಮರೆತು ಮನಸ್ಸನ್ನು ಭಗವದಭಿಮುಖಿಗೊಳಿಸುವ ಪ್ರಯತ್ನವೇ ಈ ಜಪಯಜ್ಞ. ಇದರಲ್ಲಿ ಸಂಪೂರ್ಣ ತೊಡಗಿಸಿಕೊಳ್ಳುವುದಕ್ಕೆ ಬೇಕಾದ ಎಲ್ಲ ಸೌಲಭ್ಯಗಳನ್ನೂ ಆಶ್ರಮದ ಮುಖ್ಯಸ್ಥರಾದ ಸ್ವಾಮಿ ರಾಘವೇಶಾನಂದಜಿ ಮತ್ತು ಇತರ ಆಶ್ರಮವಾಸಿಗಳು ದೊರಕಿಸಿಕೊಟ್ಟಿದ್ದರು. ಅವರೆಲ್ಲರಿಗೂ ನಮ್ಮ ಕೃತಜ್ಞತೆಗಳು.

ಬೆಳಗಾವಿಯ ಆಶ್ರಮದ ಪರಿಸರವು ಜಪಯಜ್ಞಕ್ಕೆ ಹೇಳಿಮಾಡಿಸಿದಂತಿದೆ. ಪ್ರಕೃತಿ ಸೌಂದರ್ಯದ ಹೃದಯಭಾಗದಲ್ಲಿ, ಸುಂದರವಾದ ದೇವಮಂದಿರವಿದೆ. ಅಲ್ಲಿರುವ ದಿವ್ಯತ್ರಯರ ದಿವ್ಯ ಮಂಗಳ ಸಾನ್ನಿಧ್ಯದಲ್ಲಿ ಜಪಯಜ್ಞ ಕಾರ್ಯಕ್ರಮ ನಡೆಯಿತು.

ಜಪವೆಂದರೆ, ಭಗವನ್ನಾಮವನ್ನು, ಅದರ ಅರ್ಥವನ್ನು ಪರಿಭಾವಿಸುತ್ತ ಪುನರುಚ್ಚರಿಸುವುದು. ಶ್ರೀರಾಮಕೃಷ್ಣರು ಹೇಳುವಂತೆ ಕಲಿಯುಗದಲ್ಲಿ ಭಗವತ್ಸಾಕ್ಷಾತ್ಕಾರಕ್ಕೆ ಇರುವ ಸರಳ ಉಪಾಯ ಇದು. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು **'ಯಜ್ಞಾನಾಂ ಜಪಯಜ್ಞೋಸ್ಮಿ'** (ಯಜ್ಞಗಳಲ್ಲಿ ನಾನು ಜಪಯಜ್ಞವಾಗಿದ್ದೇನೆ) ಎನ್ನುತ್ತಾನೆ. ಪಾತಂಜಲ ಯೋಗದರ್ಶನದಲ್ಲಿ **'ತಜ್ಜಪಸ್ತದರ್ಥಭಾವನಂ'** (ಅರ್ಥಭಾವನೆಯಿಂದ ಕೂಡಿಕೊಂಡು ಮಾಡುವ ಪುರುಚ್ಚರಣೆಯೇ ಜಪ) ಎಂದು ಹೇಳಿದೆ. ಮುಕುಂದ ಮಾಲಾ ಎಂಬ ಭಕ್ತಿ ಸ್ತೋತ್ರದಲ್ಲಿ, **'ಜಿಹ್ವೇ ಶ್ರೀಕೃಷ್ಣ ಮಂತ್ರಂ ಜಪ ಜಪ ಸತತಂ, ಜನ್ಮಸಾಫಲ್ಯ ಮಂತ್ರಂ"** (ಜನ್ಮವನ್ನು ಸಾರ್ಥಕವನ್ನಾಗಿ ಮಾಡುವ ಶ್ರೀಕೃಷ್ಣ ಮಂತ್ರವನ್ನು ಯಾವಾಗಲೂ ಜಪಿಸುತ್ತಿರು) ಎಂಬ ಮಾತು ಬರುತ್ತದೆ. ಪುರಂದರದಾಸರು ಹೀಗೆ ಹಾಡಿದ್ದಾರೆ: **'ಅಚ್ಯುತನ್ನ ನಾಮವೆಂಬೊ ಮೆಚ್ಚು ಮದ್ದು ತಲೆಗೆ ಏರಿ, ಹುಚ್ಚು ಹಿಡಿಯಿತು, ಎನಗೆ ಹುಚ್ಚು ಹಿಡಿಯಿತು.'** ಶ್ರೀರಾಮಕೃಷ್ಣರ ಪ್ರತ್ಯಕ್ಷಶಿಷ್ಯರಾದ ಸ್ವಾಮಿ ಬ್ರಹ್ಮಾನಂದಜಿ ಅವರು ಹೀಗೆ ಹೇಳುತ್ತಾರೆ: " ಈ ಯುಗಕ್ಕೆ ಹೇಳಿಮಾಡಿಸಿದ್ದು ಜಪ ಸಾಧನೆ. ಅದಕ್ಕಿಂತಲೂ ಸುಲಭವಾದ ಆಧ್ಯಾತ್ಮಿಕ ಸಾಧನೆ ಯಾವುದೂ ಇಲ್ಲ."

ಐದು ದಿನಗಳ ಅವಧಿಯ ಈ ಶಿಬಿರವು, ಪ್ರತಿದಿನ ಬೆಳಗ್ಗೆ ೫.೩೦ ರಿಂದ ರಾತ್ರಿ ೯.೩೦ ರವರೆಗೆ ಜರುಗಿತು. ಸ್ವಸ್ತಿವಾಚನ ಮತ್ತು ಓಂಕಾರದ ಉಚ್ಚಾರಣೆಗಳಿಂದ ಕಾರ್ಯಕ್ರಮ ಆರಂಭವಾಗುತ್ತಿತ್ತು. ನಂತರ ಭಜನೆ ಮತ್ತು ಜಪಧ್ಯಾನಗಳಲ್ಲಿ ತೊಡಗುತ್ತಿದ್ದೆವು. ಭಜನೆಯಿಂದ ಮಂತ್ರಮುಗ್ಧವಾದ ಮನಸ್ಸು ಸಹಜವಾಗಿಯೇ ದೀರ್ಘಕಾಲದ ಜಪಧ್ಯಾನಗಳಿಗೆ ಅಣಿಯಾಗುತ್ತಿತ್ತು. ಆಗ ಕಾಲದ ಪರಿವೆಯೇ ಇರುತ್ತಿರಲಿಲ್ಲ. ಮಧ್ಯಾಹ್ನದ ಭೋಜನಾನಂತರ, ಸ್ವಾಮಿ ರಾಘವೇಶಾನಂದಜಿ ಅವರು ರಾಮಕೃಷ್ಣ ವಚನವೇದದ ಬಗ್ಗೆ ಪ್ರವಚನಗಳನ್ನು ನೀಡುತ್ತಿದ್ದರು. ಇದು ನಮ್ಮ ಜಪಸಾಧನೆಗೆ ಸ್ಫೂರ್ತಿ ನೀಡುತ್ತಿತ್ತು. ಬೆಳಗಿನಿಂದ ಸಂಜೆಯವರೆಗೆ ಜಪದಲ್ಲಿ ತೊಡಗಿದ್ದ ಭಕ್ತರನ್ನು ನೋಡಿದಾಗ, ಇದೇನು ತಪೋಲೋಕವೋ ಎಂಬ ಭಾವನೆ ಬರುತ್ತಿತ್ತು.

ಸಂಪೂರ್ಣ ಮೌನಾಚರಣೆ, ಶಾಂತಿಪಾಲನೆ, ಕಟ್ಟುನಿಟ್ಟಾದ ಶಿಸ್ತಿನ ಅನುಸರಣೆ, – ಇವು ಜಪಯಜ್ಞದ ವೈಶಿಷ್ಟ್ಯತೆಗಳಲ್ಲಿ ಕೆಲವು. ಮನಸ್ಸು ಅಂತರ್ಮುಖಿಯಾಗಲು ಇವು ಬಹಳ ಸಹಾಯ ಮಾಡಿದವು. ಜಪಯಜ್ಞ ನಡೆಯುತ್ತಿದ್ದ ದೇವ ಮಂದಿರದ ಅಂಗಣ, ಕಾಳಿದಾಸ ಹೇಳುವಂತೆ – **ಚಿತ್ರಾರ್ಪಿತಾರಂಭಮಿವಾವತಸ್ಥೇ**, ಅಂದರೆ ಚಿತ್ರದಲ್ಲಿ ಬರೆದಿಟ್ಟಿರುವಂತೆ ಸ್ತಬ್ಧವಾಗಿರುತ್ತಿತ್ತು. ರುಚಿಯಾದ ಭೋಜನ ಪ್ರಸಾದ ವ್ಯವಸ್ಥೆ ಮನಸ್ಸನ್ನು ಪ್ರಸನ್ನವಾಗಿರಿಸಿತ್ತು!

ಭಾಗವಹಿಸಿದ್ದ ಸಾಧಕರು ಜಪಯಜ್ಞವನ್ನು ಇನ್ನೂ ಪರಿಣಾಮಕಾರಿಯಾಗಿಸಲು ಕೆಲವು ಸಲಹೆಗಳನ್ನು ನೀಡಿದರು: ೧. ಸ್ವಾಮೀಜಿಯವರ ಜೊತೆಗೆ ಸಂವಾದದ ಅವಧಿ ಇರಬೇಕು ೨. ವ್ಯಕ್ತಿತ್ವದ ಬೆಳವಣಿಗೆ ಮತ್ತು ಆಧ್ಯಾತ್ಮಿಕ ಮಾರ್ಗದರ್ಶನಕ್ಕಾಗಿ ಆಧ್ಯಾತ್ಮಿಕ ಆಪ್ತ ಸಲಹೆ ಕಾರ್ಯಕ್ರಮ ಇರಬೇಕು. ೩. ಮಹಿಳೆಯರ ಜೊತೆಗೆ ಪುರುಷರೂ ಹೆಚ್ಚು ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕು.

ಜಪಯಜ್ಞದ ಫಲಶ್ರುತಿ ಇದು: **'ತಮಸೋ ಮಾ ಜ್ಯೋತಿರ್ಗಮಯ'** – ಈ ಶಿಬಿರವು ತಮಸ್ಸಿನಿಂದ ಜ್ಯೋತಿಯ ಕಡೆಗೆ ಹೋಗುವ ಅನುಭವವನ್ನು ಶಿಬಿರಾರ್ಥಿಗಳಿಗೆ ನೀಡಿದೆ. ಹೀಗಾಗಿ ಶಿಬಿರದ ಉದ್ದೇಶವು ಸಫಲವೆನಿಸಿದೆ. ಈ ಶಿಬಿರದಿಂದಾಗಿ, **'ಗೋವಿಂದೇತಿ ಸದಾ ಧ್ಯಾನಂ, ಗೋವಿಂದೇತಿ ಸದಾ ಜಪಃ, ಸದಾ ಗೋವಿಂದ ಕೀರ್ತನಂ'** ಎಂಬ ಮಾತುಗಳಲ್ಲಿನ ಭಗವದನುಭೂತಿಯ ಗುಂಗು ಮನಸ್ಸನ್ನು ಆವರಿಸಿದೆ. ಆಶ್ರಮದ ಜಪಯಜ್ಞದಲ್ಲಿ ಭಾಗವಹಿಸಿದ ಸಾಧಕರಿಗೆ ಮನೆ–ದಿನ ಎಲ್ಲವೂ ಮರೆತುಹೋಗಿತ್ತು. ಕಾಲ ಹೀಗೆಯೇ ಮುಂದುವರೆದರೆ ಎಷ್ಟು ಚೆನ್ನ ಎನ್ನುವ ಭಾವನೆಯುಂಟಾಗಿತ್ತು!

(ಈ ಶಿಬಿರಗಳಲ್ಲಿ ಭಾಗವಹಿಸಲು ಇಚ್ಛೆಯಿರುವವರು, **ರಾಮಕೃಷ್ಣ ಮಿಷನ್ ಆಶ್ರಮ, ಕೋಟೆ, ಬೆಳಗಾವಿ ೫೯೦೦೧೬** – ಈ ವಿಳಾಸವನ್ನು ಸಂಪರ್ಕಿಸಬಹುದು.)

---

*ಲೇಖಕರು ಬೆಂಗಳೂರು ರಾಮಕೃಷ್ಣ ಮಠದ ಭಕ್ತರು.*